**ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ ನ್ಯಾಯಾಲಯ, ಮದ್ದೂರು.**

**<u>ಸಿಸಿ 352 /2024</u>**

| | | | |
|---|---|---|---|
| **ಸಾಕ್ಷಿದಾರರ ಹೆಸರು** | - | ಮಧು | **ಚಾ.ಸಾ.-2** |
| **ತಂದೆಯ/ಗಂಡನ ಹೆಸರು** | - | ಕೃಷ್ಣ | **ಫ್ರಾ.ಸಾ.-3** |
| **ವಯಸ್ಸು** | - | 28 ವರ್ಷ | |
| **ಉದ್ಯೋಗ** | - | ಖಾಸಗಿ ಕೆಲಸ | |
| **ವಾಸಸ್ಥಳಃ** | - | ಅರವನಹಳ್ಳಿ | |

ದಿನಾಂಕಃ 01-08-2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ ಅಭಿಯೋಜನೆಯ ಪರಃ ಮಾನ್ಯ ವಿಶೇಷ ಸ ಅ ಅ ರವರಿಂದಃ</u>**

ಚಾ.ಸಾ. 1 ನನ್ನ ತಾಯಿ, ಚಾಸಾ-3 ನನ್ನ ತಂದೆ, ಚಾಸಾ-4 ರಿಂದ 8 ರವರು ನಮ್ಮ ಊರಿನವರು. ಆರೋಪಿತರು ಪರಿಚಯ ಇದೆ ನಮ್ಮ ಜಮೀನಿನ ಪಕ್ಕದವರು.

ದಿಃ20-01-2024 ರಂದು ಸರ್ವೆ ಮಾಡಲು ಸರ್ವೆಯರ್ ರವರು ಜಮೀನಿನ ಬಳಿ ಬಂದಿರುತ್ತಾರೆ. ಆ ಸಮಯದಲ್ಲಿ ಮಧ್ಯಾಹ್ನ 12-30 ರ ಸಮಯದಲ್ಲಿ ಆರೋಪಿತರು ಸರ್ವೆ ಮಾಡಲು ತೊಂದರೆಯನ್ನು ನೀಡಿರುತ್ತಾರೆ ಮತ್ತು ಸರ್ವೆಯರ್ ರವರಿಗೆ ಸರ್ವೆ ಕಾರ್ಯವನ್ನು ಮಾಡಲು ಬಿಟ್ಟಿರುವುದಿಲ್ಲ ಹಾಗೂ ಆರೋಪಿತರು ಆ ಸಮಯದಲ್ಲಿ ಚಾಸಾ-1 ರವರಿಗೆ ಅವಾಚ್ಯ ಶಬ್ಧಗಳಿಂದ ಬೈದಿರುತ್ತಾರೆ. ಆರೋಪಿತರು ಚಾಸಾ-1 ರವರಿಗೆ ಜಗಳ ಮಾಡಿ , ಹಲ್ಲೆ ಮಾಡಿ, ಅವಮಾನಪಡಿಸಿರುತ್ತಾರೆ. ನಂತರ ಊರಿನ ಗ್ರಾಮಸ್ಥರಾದ ಚಾಸಾ-7 ಮತ್ತು 8 ರವರು ಬಂದು ಗಲಾಟೆಯನ್ನು ಬಿಡಿಸಿರುತ್ತಾರೆ.

ನಂತರ ದಿಃ 22-01-2024 ರಂದು ಸಂಜೆ ಸುಮಾರು 05-00 ಗಂಟೆ ಸಮಯದಲ್ಲಿ ನನ್ನ ತಂದೆಯಾದ ಚಾಸಾ-3 ರವರು 1 ನೇ ಆರೋಪಿಯ ಮನೆಯ ಮುಂದೆ ಬರುತ್ತಿದ್ದಂತಹ ಸಮಯದಲ್ಲಿ ಅವರಿಗೆ ಅವಾಚ್ಯ ಶಬ್ಧಗಳಿಂದ ಬೈದಿರುತ್ತಾರೆ

ಮತ್ತು ನನ್ನ ತಂದೆ ಚಾಸಾ-3 ರವರನ್ನು ಕೆಲಸದಿಂದ ತೆಗೆಸುವುದಾಗಿ ಹೆದರಿಸಿರುತ್ತಾರೆ. ನಾನು ಈ ಬಗ್ಗೆ ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದೆಯಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**ನ್ಯಾಯಾ ಮತ್ತು ಸಮಾನತೆ ದೃಷ್ಟಿಯಿಂದ ಪಾಟೀಸವಾಲನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ )

ಓ ಹೇ ಕೇ ಸರಿಯಾಗಿದೆಯೆಂದು ಒಪ್ಪಿರುತ್ತಾರೆ.

2 ನೇ ಅಪರ ಸಿವಿಲ್ ನ್ಯಾಯಾಧೀಶರು

ಸಾಕ್ಷಿ ಸಹಿ

ಮತ್ತು ಜೆ ಎಂ ಎಫ್ ಸಿ , ಮದ್ದೂರು.